## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS-167/2015** **PW-1**

**ದಿಃ 11.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1, 4, 5 ನೇ ಪ್ರತಿವಾದಿ ಪರ ಶ್ರೀ ಎಂ ಎಸ್ ಬಿ ವಕೀಲರಿಂದಃ**

**7.** ನಾನು ಕಳೆದ ಬಾರಿ ತಿಳಿಸಿದಂತೆ ನನ್ನ ವಕೀಲರ ಬಳಿ ಕೇಳಲಾಗಿ ಅವರು ದಾಖಲೆಗಳನ್ನು ಕೊಟ್ಟಿರುತ್ತೇನೆಂದು ತಿಳಿಸಿದ್ದು ನಾನು ಸರ್ವೆ ನಂಬರ ಃ 95 ಕ್ಕೆ ಸಂಬಂದಿಸಿದಂತೆ ಉತಾರವನ್ನು ಕೊಟ್ಟಿರುತ್ತೇನೆಂದು ನೆನಪಿಗೆ ನಂತರ ಬಂದಿರುತ್ತದೆ. ಶೇಖ ಎಂಬುವವರಿಂದ ಕಲ್ಲವ್ವ ಮಲ್ಲಪ್ಪ ಕಟ್ಟಿ ಎಂಬುವವರು ಖರೀದಿ ಹಿಡಿದಿದ್ದು ಇದಕ್ಕೆ ಸಂಬಂದಿಸಿದಂತೆ ದಾಖಲೆ ಕೊಟ್ಟಿರುತ್ತೇನೆ. ಕಲ್ಲವ್ವ ರವರು ನೇರವಾಗಿ ಖರೀದಿ ಹಿಡಿದಿರುತ್ತಾರೆಂದು ನುಡಿಯುತ್ತೀರಾ ಎಂದರೆ ಸಾಕ್ಷಿಯು ಹೌದು ಅವರೇ ನೇರವಾಗಿ ಖರೀದಿ ಮಾಡಿರುತ್ತಾರೆಂದು ನುಡಿಯುತ್ತಾರೆ. 2014 ರಲ್ಲಿ ಖರೀದಿ ಮಾಡಿರುತ್ತಾರೆ. ನಿಖರವಾದ ದಿನಾಂಕ ನೆನಪಿಗೆ ಬರುತ್ತಿಲ್ಲ. ಎಷ್ಟು ಹಣಕ್ಕೆ ಖರೀದಿ ಹಿಡಿದಿರುತ್ತಾರೆಂದರೆ ಸಾಕ್ಷಿಯು ರೂ.2,14,000/- ಗಳಿಗೆ ಖರೀದಿ ಹಿಡಿದಿರುತ್ತಾರೆಂದು ನಡಿಯುತ್ತಾರೆ. ದಾವಾ ಮೊದಲು ಮಾಡಿದ್ದ ಅಥವಾ ಅಸ್ತಿಯನ್ನು ಮೊದಲು ಖರೀದಿಸಿದಾ ಎಂದರೆ ಸಾಕ್ಷಿಯು ದಾವೆ ಮೊದಲು ಮಾಡಿದ್ದು ಎನ್ನುತ್ತಾರೆ. ನಾನು ಕಲ್ಲವ್ವಳಿಗೆ ಆಸ್ತಿ ಖರೀದಿಸಲು ಹಣವನ್ನು ಕೊಟ್ಟಿರುವದಿಲ್ಲ. ಆ ಕಾಗದ ಪತ್ರದ ಪ್ರಕಾರ ಕಲ್ಲವ್ವಳು ಖರೀದಿ ಹಣವನ್ನು ನೇರವಾಗಿ ಮಾರಾಟ ಮಾಡಿದ ವ್ಯಕ್ತಿಗೆ ಸಂದಾಯ ಮಾಡಿ ಖರೀದಿ ಹಿಡಿದಿರುತ್ತಾರೆಂದು ಉಲ್ಲೇಖ ಇದೆ ಎಂದರೆ ಸರಿ. ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಲಾಗಿದೆ ಎಂದು ತಮ್ಮ ವಾದ ಪತ್ರದಲ್ಲಿ ತಿಳಿಸಿದ್ದು ಯಾವ ದಾಖಲೆಯನ್ನು ಹಾಜರು ಪಡಿಸಿರುತ್ತೀರಿ ಎಂದರೆ ಸಾಕ್ಷಿಯು ದಾಖಲೆ ಉತಾರವನ್ನು ಕೊಟ್ಟಿದ್ದು ಮ್ಯಾನೇಜರ ರವರು ಮಾಡಿರುತ್ತಾರೆಂದು ನುಡಿಯುತ್ತಾರೆ. ಈ ಸಂದರ್ಬದಲ್ಲಿ ಸಾಕ್ಷಿಗೆ ವಾದಿ ಪರ ವಕೀಲರು ಅವರ ಹೆಸರನ್ನು ನುಡಿಯುವಂತೆ ತಿಳಿಸಿದ ಕಾರಣ ಸಾಕ್ಷಿಯು ಬಸಪ್ಪ ಚನ್ನಪ್ಪ ಕಟ್ಟಿ ಎಂದು ನುಡಿಯುತ್ತಾರೆ. ಬಸಪ್ಪ ಚನ್ನಪ್ಪ ಕಟ್ಟಿ ರವರ ಖಾತೆಯಿಂದ ಹಣ ಹೋದ ಬಗ್ಗೆ ಯಾವದೇ

ದಾಖಲೆ ಕೊಟ್ಟಿಲ್ಲ. ಒಟ್ಟು ಕುಟುಂಬದ ಬ್ಯಾಂಕ ಖಾತೆ ಇದೆಯೋ ಇಲ್ಲದೆಯೋ ಎಂಬುದು ನನಗೆ ಗೂತ್ತಿಲ್ಲ. ಬಸಪ್ಪ ಹಿರಿತನ ಮಾಡುತ್ತಿದ್ದ ಬಗ್ಗೆ ಯಾವದೇ ಕಾಗದ ಇಲ್ಲ ಆದರೆ ಊರಿನವರು ಒಪ್ಪಿಸಿದ್ದರು. ಈ ರೀತಿ ಊರಿನವರು ಒಪ್ಪಿಸಿದ ಬಗ್ಗೆ ಕಾಗದ ಪತ್ರ ಇದೆಯಾ ಎಂದರೆ ಸಾಕ್ಷಿಯು ಯಾವದೇ ಕಾಗದ ಪತ್ರಗಳು ಆಗುವದಿಲ್ಲ ಎನ್ನುತ್ತಾರೆ. ಯಾವ ಹಿರಿಯರ ಎಂದರೆ ಸಾಕ್ಷಿಯು ಶಂಕ್ರಪ್ಪ ಚುರುಮರಿ ಎಂದು ಆಗಿದ್ದು ಅವರೇ ನಮ್ಮ ಮನೆಯ ಎಲ್ಲಾ ವಿಚಾರಗಳಲ್ಲಿಯೂ ಮದ್ಯಸ್ಥಿಕೆ ಮಾಡುತ್ತಿದ್ದರು. ಈ ವಿಷಯವನ್ನು ನನ್ನ ವಕೀಲರಿಗೆ ಹೇಳುವ ಸಂದರ್ಬ ಬರದ ಕಾರಣ ತಿಳಿಸಿಲ್ಲ ಮತ್ತು ಬರೆಸಿರುವದಿಲ್ಲ. ಯಾವ ತಾರೀಖನಂದು ಹಿರಿತನವನ್ನು ಬಸಪ್ಪನಿಗೆ ಕೊಟ್ಟಿರುತ್ತಾರೆಂದರೆ ಗೊತ್ತಿಲ್ಲ. ತಾವು ಗೊತ್ತಿರದ ವಿಚಾರವನ್ನು ನ್ಯಾಯಾಲಯಕ್ಕೆ ತಿಳಿಸುತ್ತಿದ್ದೀರಿ ಎಂದರೆ ಸಾಕ್ಷಿಯು ದಿನಾಂಕ ದ್ಯಾಸ ಇಲ್ಲ ಎಂದು ನುಡಿಯುತ್ತಾರೆ. ಕಲ್ಲವ್ವನಿಗೆ ಹಣವು ಯಾವ ರೀತಿ ಹೊಂದಿಕೆ ಆಗಿದೆ ಎಂದು ತೋರಿಸಲು ಯಾವದೇ ದಾಖಲೆಗಳನ್ನು ಸಂಗ್ರಹಿಸಲು ಹೋಗಿರುವದಿಲ್ಲ ಆದರೆ ಅವರಿಗೆ ಹಾಲು ಮಾರಾಟದಿಂದ ಹೊಂದಿಕೆಯಾಗಿದೆ ಎಂದು ಗೊತ್ತಾಗಿರುತ್ತದೆ. ಕಲ್ಲವ್ವನ ಗಂಡ ಹಣ್ಣಿನ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಾರೆಂದರೆ ಸರಿ. ಅದರಿಂದ ಆತನಿಗೆ ಭರ್ಜರಿ ಆದಾಯ ಇತ್ತು ಎಂದರೆ ಸರಿ. ನನಗೆ ಮಲ್ಲಪ್ಪ ಮತ್ತು ಅವರ ಮಕ್ಕಳು ಇರುವ ಓಣಿಯ ಹೆಸರು ಗೊತ್ತಿಲ್ಲ. ಮಲ್ಲಪ್ಪ ಅವರ ಮಕ್ಕಳೊಂದಿಗೆ ಬೇರೆಯಾಗಿ ವಾಸವಾಗಿರುತ್ತಾರೆಂದರೆ ಸರಿಯಲ್ಲ. ನಾನು ವಾಸವಾಗಿರುವದು ನಡುವಿನ ಓಣಿಯಾಗಿರುತ್ತದೆ. ಶಂಕ್ರಪ್ಪ ಯಾವ ಓಣಿಯಲ್ಲಿರುತ್ತಾರೆಂದರೆ ಸಾಕ್ಷಿಯು ನಡುವಿನ ಓಣಿಯಲ್ಲಿರುತ್ತಾರೆಂದು ನುಡಿಯುತ್ತಾರೆ. ನಡುವಿನ ಓಣಿಯಲ್ಲಿ ಒಟ್ಟು ಮೂರು ಮನೆ ಇರುತ್ತವೆ. ಊರಿನಲ್ಲಿ ಎರಡು ಹಳೇ ಮನೆ ಮತ್ತು ಒಂದು ಪಡಾ ಜಾಗಾ ಇತ್ತು. ನಾನು ಇರುವ ಮನೆಯ ಬಾಗಿಲು ಉತ್ತರದ ದಿಕ್ಕಿಗೆ ಇದೆ. ನನ್ನ ಮನೆಯ ಎದುರುಗಡೆ ಬಸಪ್ಪ ಇರುತ್ತಾರೆಂದರೆ ಸರಿ. ನಾನು ಮತ್ತು ಬಸಪ್ಪ ಎರಡು ಮನೆಯಲ್ಲಿರುತ್ತೀರಿ ಎಂದರೆ ಸರಿ. ಬಸಪ್ಪ ಇರುವ ಮನೆಯಲ್ಲಿ ಎರಡು ಭಾಗ ಆಗಿದ್ದು ಒಂದರಲ್ಲಿ ಬಸಪ್ಪನಕುಟುಂಬ ಹಾಗೂ ಮತ್ತೊಂದರಲ್ಲಿ ಶಂಕ್ರಪ್ಪನ ಕುಟುಂಬ ಇರುತ್ತದೆಂದರೆ ಸಾಕ್ಷಿಯು ಏನೆಲ್ಲಾ ಮಾಡಿಕೊಂಡಿರುತ್ತಾರೆಂಬುದು ಗೊತ್ತಿಲ್ಲ ಎನ್ನುತ್ತಾರೆ. ತಮ್ಮ ಮನೆ ಬಾಗಿಲು ಮತ್ತು ಬಸಪ್ಪನ ಮನೆ ಬಾಗಿಲು ಎದುರುಬದುರು ಎಂದರೆ ಸರಿ. ತಮ್ಮ ಮನೆಯಲ್ಲೆ ಆಗುವ ಚಟುವಟಿಕೆಗಳು ಹಾಗೂ ಅವರ ಮನೆಯಲ್ಲಿ ಆಗುವ ಚಟುವಟಿಕೆಗಳು ಗೊತ್ತಾಗುತ್ತವೆಂದರೆ ಸಾಕ್ಷಿಯು ನನಗೇನೂ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತಾವು ಮತ್ತು ತಮ್ಮ ಗಂಡ ತಾವು ಈಗ ವಾಸವಾಗಿರುವ ಮನೆಯಲ್ಲಿ ಇರುತ್ತೀರಿ ಎಂದರೆ ಸಾಕ್ಷಿಯು

ಕಟ್ಟಿಮನೆಯಲ್ಲಿದ್ದು ಅದು ಬಿದ್ದ ನಂತರ ಈಗಿರುವ ಮನೆಯಲ್ಲಿದ್ದು ಬಸಪ್ಪ ಮನೆಯ ಕಟ್ಟೆ ಮೇಲೆ ವಾಸವಾಗಿದ್ದೆವು. ನನ್ನ ಗಂಡ ಬದುಕಿದ್ದಾಗ ಈ ರೀತಿ ಬಸಪ್ಪನ ಮನೆ ಕಟ್ಟಿ ಮೇಲೆ ವಾಸವಾಗಿದ್ದೆವು. ಆ ರೀತಿ ಇದ್ದು ನಂತರ ಬಿದ್ದನಂತರ ಮನೆಯನ್ನು ಕಟ್ಟಿಕೊಂಡು ಬಂದಿರುತ್ತೀರಿ ಎಂದರೆ ಸಾಕ್ಷಿಯು ಬಸಪ್ಪ ಕಟ್ಟಿಕೊಟ್ಟ ನಂತರ ಬಂದಿರುತ್ತೇವೆ ಎಂದು ನುಡಿಯುತ್ತಾರೆ. ಬಸಪ್ಪ ಕಟ್ಟಿಕೊಟ್ಟ ಬಗ್ಗೆ ಕಾಗದ ಪತ್ರ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಯಾವದೇ ಕಾಗದ ಪತ್ರ ಇಲ್ಲ ಎನ್ನುತ್ತಾರೆ. ತಾವು ತಮ್ಮ ಗಂಡ ಮತ್ತು ಮಕ್ಕಳು ಬೇರೆಯಾಗಿ ವಾಸವಾದ್ದೀರಾ ಎಂದರೆ ಸಾಕ್ಷಿಯು ಈ ಕೇಸನ್ನು ಹಾಕಲು ಅದೇ ಕಾರಣ ಆಗಿರುತ್ತದೆಂದು ನುಡಿಯುತ್ತಾರೆ. ನನ್ನ ಗಂಡ ಮರಣ ಹೊಂದಿದ 5-6 ವರ್ಷಕ್ಕೆ ಈ ಕೇಸನ್ನು ಹಾಕಿರುತ್ತೇನೆ. ತಮ್ಮ ಗಂಡ ಮರಣ ಹೊಂದುವ ಪೂರ್ವದಲ್ಲಿ ಸುಮಾರು ವರ್ಷಗಳಿಂದ ತಮ್ಮ ಕುಟುಂಬದ ಜೊತೆಗೆ ಕಟ್ಟಿ ಮೇಲೆ ಬೇರೆಯಾಗಿ ವಾಸವಾಗಿದ್ದೀರಿ ಎಂದರೆ ಸರಿಯಲ್ಲ. ತಮ್ಮ ಪ್ರಕಾರ ಕಟ್ಟಿ ರವರ ಪಿತ್ರಾರ್ಜಿತ ಆಸ್ತಿಯಲ್ಲಿ ಹಿಸ್ಸಾ ಆಗಿಲ್ಲವಾ ಎಂದರೆ ಸಾಕ್ಷಿಯು ನನ್ನ ಪ್ರಕಾರ ಆಗಿಲ್ಲ ಎಂದು ನುಡಿಯುತ್ತಾರೆ. ಹಿಸ್ಸಾ ಆಗಿಲ್ಲಾ ಎಂದರೆ ತಮ್ಮ ಮಾವನವರಿಗೆ ಎಷ್ಟು ಜನ ಹೆಣ್ಣು ಮಕ್ಕಳೆಂದರೆ ಸಾಕ್ಷಿಯು ನಾಲ್ಕು ಜನ ಹೆಣ್ಣು ಮಕ್ಕಳು ಎನ್ನುತ್ತಾರೆ.

(ಮುಂದುವರೆದ ಪಾಟೀ ಸವಾಲಗೆ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು. )

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**